

ಬಿಸಿಲು
ಬೆಳದಿಂಗಳು
ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಹೃದಯಾಂತರಾಳದ ಗಣಪ!

ಇಂದು ಗಣೇಶ ಚತುರ್ಥಿ. ದೇಶಾದ್ಯಂತ ಹಬ್ಬದ ಸಡಗರ, ಸಂಭ್ರಮ. ಬೇಳೆ, ಬೆಲ್ಲ, ಎಣ್ಣೆ ಎಷ್ಟೇ ತುಟ್ಟಿಯಾದರೂ ಗಣೇಶನಿಗೆ ಕಡುಬಿನ ನೈವೇದ್ಯವನ್ನು ಇಲ್ಲವೆನ್ನಲಾದೀತೆ! ಲಂಬೋದರ ಗಣೇಶನಿಗೆ ಕಾಯಿಕಡುಬು, ಕರ್ಜಿಕಾಯಿ, ಪಂಚಕಜ್ಜಾಯ, ವಿಧ ವಿಧದ ಉಂಡೆಗಳು... ಹೀಗೆ ಭಕ್ಷಭೋಜ್ಯಗಳನ್ನು ತಯಾರಿಸಲೇಬೇಕು. ಅವನ್ನೆಲ್ಲಾ ಅವನಿಗೆ ವಿಧ್ಯುಕ್ತವಾಗಿ ನೈವೇದ್ಯ ಮಾಡಿದ ನಂತರ 'ತೋರಿ ಉಂಬ ಲಾಭ' ಯಾರಿಗೆ? ಬಹುಜನಪ್ರಿಯನೂ, ಭೋಜನಪ್ರಿಯನೂ ಆದ ಗಣಪನ ಹೊಟ್ಟೆ ಇರುವುದೇ ಆಬಾಲವೃದ್ಧರೆಲ್ಲರ ಹೊಟ್ಟೆಯನ್ನು ಮನದಣಿಯೆ ತಣಿಸಲು. ಆದಕಾರಣ ಅವನು ಎಲ್ಲರ ಪಾಲಿನ ಆರಾಧ್ಯ ದೈವ. ಆಜೀವ ಬ್ರಹ್ಮಚಾರಿಯಾದ ಗಣಪ 'ಸಿದ್ಧಿ' 'ಬುದ್ಧಿ'ಯರೆಂಬ ಇಬ್ಬರು ಹೆಂಡಿರೊಡನೆ ತನ್ನ ವಾಹನವಾದ ಇಲಿಯ ಬೆನ್ನೇರಿ ತೌರಿಗೆ ಬಂದ ತಾಯಿ ಗೌರಿಯನ್ನು ಹಿಂಬಾಲಿಸಿ ಈ ಭೂಮಿಗೆ ಬರುವುದೇನು ಸಾಮಾನ್ಯವೇ? ಅವನೇನಾದರೂ ನಿಜಸ್ವರೂಪದಲ್ಲಿ ರಸ್ತೆಯಲ್ಲಿ ನಡೆದಾಡಿಕೊಂಡು ಬಂದರೆ ಇತ್ತೀಚೆಗೆ ಆನೆಹಾವಳಿಯಿಂದ ಘಾಸಿಗೊಂಡಿರುವ ನಗರನಿವಾಸಿಗಳು ಬೆಚ್ಚಿಬಿದ್ದು ಓಟ ಕೀಳುವುದರಲ್ಲಿ ಅನುಮಾನವಿಲ್ಲ! ಈ ಬಾರಿ ಗಣಪ ತಿಂಗಳ ಮೊದಲ ದಿನವೇ ಬಂದು ಕೈಗೆ ಸಂಬಳ ಸಿಗದಂತೆ ಮಾಡಿರುವುದು ಮಾತ್ರ ವಿಘ್ನನಿವಾರಕನೆನಿಸಿದ ಅವನಿಗೆ ಮರ್ಯಾದೆ ತರುವ ವಿಷಯ ಅಲ್ಲ. ಆದರೂ ಅದಾವುದನ್ನೂ ಲೆಕ್ಕಿಸದೆ ನಮ್ಮ ಜನ ಹಬ್ಬ ಆಚರಿಸುತ್ತಾರೆ. ಪಡ್ಡೆಹುಡುಗರು ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಟೋಲ್‌ಗೇಟ್‌ಗಳಂತೆ ರಸ್ತೆಗಳಲ್ಲಿ ಸಂಚರಿಸುವ ಎಲ್ಲ ವಾಹನಗಳನ್ನು ಅಡ್ಡಗಟ್ಟಿ ನಿಲ್ಲಿಸುತ್ತಾರೆ. ಅವರ ಕೈಯಲ್ಲಿರುವ ಡಬ್ಬಿಗಳಿಗೆ 'ಕಾಣಿಕೆ' ಸಲ್ಲಿಸಿದರೆ ಮಾತ್ರ ನೀವು ಬಚಾವು. ಇಲ್ಲದಿದ್ದರೆ ಮದಿಸಿದ ಆ 'ಮರಿಯಾನೆ'ಗಳ ಕೈಯಲ್ಲಿ ನಿಮ್ಮ ಕಾರು ಜಖಂ ಆಗುವುದು ಖಂಡಿತ!

ಪೇಟೆಯ ಪ್ರತಿಯೊಂದು ಬಡಾವಣೆಯಲ್ಲಿಯೂ ನಾನಾ ಸೈಜಿನ, ಡಿಸೈನಿನ ಗಣಪ ಅದ್ದೂರಿ ಪೆಂಡಾಲುಗಳಲ್ಲಿ ವಿರಾಜಮಾನನಾಗುತ್ತಾನೆ. ಪ್ರಸಿದ್ಧ ಗಾಯಕರ ಕಂಠಸಿರಿಯ ಕ್ಯಾಸೆಟ್‌ಗಳಿಂದ ಸುಶ್ರಾವ್ಯವಾಗಿ ತೂರಿಬರುವ ಭಕ್ತಿಗೀತೆಗಳಲ್ಲಿ ಗಣಪನ ಮಹಿಮೆ, ಪ್ರತಾಪಗಳು ತುಂಬಿ ಹರಿಯುವ ಆಲಮಟ್ಟಿ ಅಣೆಕಟ್ಟೆಯಂತೆ ಇಡೀ ನಾಡಿನಲ್ಲಿ ಕೋಡಿವರಿಯುತ್ತವೆ. ಯಾವುದೇ ಕಾರ್ಯವನ್ನು ಆರಂಭಿಸುವಾಗ ಅದು ನಿರ್ವಿಘ್ನವಾಗಿ ನೆರವೇರಲೆಂದು ಗಣೇಶನನ್ನು ಕುರಿತು ಪ್ರಾರ್ಥಿಸುವ ಈ ಮುಂದಿನ ಶ್ಲೋಕ ಸರ್ವವಿದಿತ:

> **ವಕ್ರತುಂಡ ಮಹಾಕಾಯ ಸೂರ್ಯಕೋಟಿ ಸಮಪ್ರಭ**
> **ನಿರ್ವಿಘ್ನಂ ಕುರು ಮೇ ದೇವ ಸರ್ವಕಾರ್ಯೇಷು ಸರ್ವದಾ!**

ಗಣಪತಿಯ ಈ ಸ್ತೋತ್ರದಲ್ಲಾಗಲೀ ಶಿವ-ವಿಷ್ಣು ಸಹಸ್ರನಾಮಾವಳಿಯಲ್ಲಾಗಲೀ ಬಳಸುವ ಶಬ್ದಗಳು ಕಿವಿಗೆ ಕೇಳಲು ಇಂಪಾಗಿರುತ್ತವೆ. ಆದರೆ ದೇವರ ಗುಣಗಾನ ಮಾಡುವ ಅವೇ ಸಂಸ್ಕೃತ ಶಬ್ದಗಳನ್ನು ಮತ್ತು ಪದಪುಂಜಗಳನ್ನು ಯಥಾವತ್ತಾಗಿ ಕನ್ನಡಕ್ಕೆ ಅನುವಾದ ಮಾಡಿದರೆ 'ಥೇಟ್ ಬೈಗುಳ'ಗಳಂತೆ ಧ್ವನಿಸುತ್ತವೆ. ಉದಾಹರಣೆಗೆ ಈ ಮೇಲಿನ ಸ್ತೋತ್ರದ ಆರಂಭದಲ್ಲಿರುವ 'ವಕ್ರತುಂಡ, ಮಹಾಕಾಯ' ಎಂಬ ಶಬ್ದಗಳನ್ನು ಅಪ್ಪಟ ಕನ್ನಡಕ್ಕೆ ಅನುವಾದಿಸಿದರೆ 'ಸೊಟ್ಟ ಮುಖದವನೇ, ದಾಂಡಿಗನೇ' ಎಂದಾಗುತ್ತದೆ. ಇದೇ ರೀತಿ 'ಲಂಬೋದರ, ಏಕದಂತ' ಎಂದರೆ 'ಡೊಳ್ಳುಹೊಟ್ಟೆಯವನೇ, ಹಲ್ಲುಮುರುಕನೇ' ಎಂದೆಲ್ಲಾ ಅನ್ನಿಸಿಕೊಂಡ ಗಣೇಶ ಸಿಟ್ಟಿಗೆದ್ದು ಹಾಗೆ ಅಂದವರ ಹಲ್ಲು ಮುರಿಯದೆ ಅನುಗ್ರಹಿಸುತ್ತಿರುವುದು ಅವನ ದೊಡ್ಡ ಗುಣವೆಂದೇ ಹೇಳಬೇಕು. ಸಂಸ್ಕೃತದಲ್ಲಿಯೇ ದೇವರ ಪ್ರಾರ್ಥನೆಯನ್ನು ಏಕೆ ಮಾಡಬೇಕು ಎಂಬುದಕ್ಕೆ ಇದೊಂದು ಕಾರಣ ಇರಬಹುದೇ? ಭಾಷಾತಜ್ಞರು ಚಿಂತಿಸುವುದೊಳಿತು.

ವ್ಯಕ್ತಿಗಳಿಗೆ ಹೇಗೆ ಮಾನ-ಮರ್ಯಾದೆ ಇರುತ್ತದೆಯೋ ಹಾಗೆಯೇ ಶಬ್ದಗಳಿಗೂ ಮಾನ-ಮರ್ಯಾದೆ ಇರುತ್ತದೆ ಎಂದು ಹೇಳಿದರೆ ನಿಮಗೆ ಆಶ್ಚರ್ಯವಾಗಬಹುದು. ಶಬ್ದಗಳ ಅರ್ಥ ವಾಸ್ತವವಾಗಿ ಒಂದೇ ಆಗಿದ್ದರೂ ಒಂದೊಂದು ಭಾಷೆಯಲ್ಲಿ ಒಂದೊಂದು ಶಬ್ದ ಧ್ವನಿಸುವ ಅರ್ಥ ಬೇರೆಯೇ ಆಗಿರುತ್ತದೆ. ಉದಾಹರಣೆಗೆ ಮುಂಡನ, ಕೇಶಕರ್ತನ, ಕ್ಷೌರ ಎಲ್ಲವುಗಳ ಅರ್ಥ ಒಂದೇ. ಆದರೆ ಕ್ಷೌರ ಎಂಬ ಶಬ್ದಕ್ಕೆ ಮುಂಡನಕ್ಕೆ ಇರುವ ಮರ್ಯಾದೆ ಇಲ್ಲ. ಹೇರ್ ಡ್ರೆಸಿಂಗ್ ಎಂಬುದಂತೂ ಇನ್ನೂ ಸುಸಂಸ್ಕೃತ ಎಂದೇ ಜನರ ಭಾವನೆ. ಅದೇ ರೀತಿ ಕ್ಷೌರಿಕ ಎಂದರೆ ಕ್ಷೌರಿಕನಿಗೆ ಸಿಟ್ಟು ಬರುತ್ತದೆ. ನಿಮ್ಮ ಮೀಸೆ ಯದ್ವಾತದ್ವಾ ಆಗದಿರಲು ನೀವು ಅವನನ್ನು ಹೇರ್ ಡ್ರೆಸರ್ ಅನ್ನಬೇಕು. ದರ್ಜಿಯನ್ನು ದರ್ಜಿ ಎಂದರೆ ಕಣ್ಣು ಕೆಂಪಗೆ ಮಾಡುತ್ತಾನೆ. ಅದೇ ಟೈಲರ್ ಅಂದರೆ ನಸುನಕ್ಕು ಬೇಗನೆ ನಿಮ್ಮ ಬಟ್ಟೆಯನ್ನು ಹೊಲಿದುಕೊಡುತ್ತಾನೆ. ಕನ್ನಡದಲ್ಲಿ ಅಗಸ, ಮಡಿವಾಳ ಎಂದರೆ ಅಪಮರ್ಯಾದೆ! ಹಿಂದಿಯ ಧೋಬಿ ಸರಿಯೇ ಸರಿ. ಹೋಟೆಲಿಗೆ ಹೋದಾಗ ನೀವು ಒಂದು ಪ್ಲೇಟ್ ಇಡ್ಲಿ ಕೊಡು, ಒಂದು ಕಪ್ ಕಾಫಿ ಕೊಡು ಎಂದೇ ಕೇಳಬೇಕು. ಕನ್ನಡಾಭಿಮಾನದಿಂದ ಒಂದು ತಟ್ಟೆ ಇಡ್ಲಿ ತಾ, ಆಮೇಲೆ ಒಂದು ಬಟ್ಟಲು ಕಾಫಿ ತಾ ಅಂದರೆ ಮಾಣಿ ನಿಮ್ಮನ್ನು ಮೃಗಾಲಯದ ಪ್ರಾಣಿಯಂತೆ ನೋಡುವುದು ಖಂಡಿತ. ಸೊಪ್ಪಿನಿಂದ ಮಾಡಿದ ಸಾರು ಬಸ್ಸಾರು. ಹಾಗೆಂದು ಅದನ್ನೇ ಪಂಚತಾರಾ ಹೋಟೆಲುಗಳಲ್ಲಿ ಸೂಪ್ ಎನ್ನುವ ಬದಲು ಹಳ್ಳಿಗರಂತೆ ಬಸ್ಸಾರು ಎಂದರೆ ಮರ್ಯಾದೆ ಬರುತ್ತದೆಯೇ! ಪದಗಳ ಬಳಕೆಯಲ್ಲಿ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ ಮಹತ್ತರ ಪಾತ್ರ ವಹಿಸುತ್ತದೆ. ವಿಚಾರ ಸರಣಿ ಎಲ್ಲಿಂದ ಎಲ್ಲಿಗೋ ಹೋಯಿತು.

ಭಾರತೀಯ ದಾರ್ಶನಿಕರು ದೇವರು ಒಬ್ಬನೇ ಎಂದು ಬೋಧಿಸಿದರೂ ಭಾರತೀಯರು ಅನೇಕ ದೇವರುಗಳಲ್ಲಿ ನಂಬಿಕೆಯುಳ್ಳವರಾಗಿದ್ದಾರೆ. ಅವರವರ ನಂಬಿಕೆಗೆ ಅನುಗುಣವಾಗಿ ಅವರವರ ಮನೆಯ ಪೂಜಾಗೃಹಗಳಲ್ಲಿ ಅನೇಕ ದೇವರುಗಳ ವಿಗ್ರಹಗಳು, ಚಿತ್ರಪಟಲಗಳು ರಾರಾಜಿಸುತ್ತವೆ. ಎಲ್ಲ ದೇವರುಗಳ ಮಧ್ಯೆಯೂ ಅಗ್ರಪೂಜೆಯನ್ನು ಪಡೆಯುವ ದೇವರೆಂದರೆ 'ಗಣೇಶ'. ಕಾಶೀ ವಿಶ್ವನಾಥನ ದರ್ಶನ ಪಡೆಯಲು ಹೋಗುವ ಶ್ರದ್ಧಾಳು ಯಾತ್ರಿಕರು ಮಾರ್ಗಮಧ್ಯೆ ರಸ್ತೆ ಬದಿಯಲ್ಲಿರುವ 'ಸಾಕ್ಷಿಗಣಪತಿ'ಯ ದರ್ಶನ ಪಡೆಯಲು ಮರೆಯುವುದಿಲ್ಲ. ಆ ಸಾಕ್ಷಿಗಣಪ ಅವರ ಯಾತ್ರೆಯ ಸಾಕ್ಷಿಯೋ ಅಥವಾ ಅಂತಃಸಾಕ್ಷಿಯ ಪ್ರತೀಕವೋ ಎಂಬುದನ್ನು ಯಾರೂ ವಿಚಾರ ಮಾಡಲು ಹೋಗುವುದಿಲ್ಲ. ಜನರ ನಂಬುಗೆಯೇ ಹಾಗೆ. ಅದು ಪ್ರಶ್ನಾತೀತ. ಕಣ್ಣಿಗೆ ಕಾಣದ ಚೇತನದ ಹುಡುಕಾಟ. ಆಕಸ್ಮಿಕ ಘಟನೆಗಳೂ ಆ ಹುಡುಕಾಟದಲ್ಲಿ ಒಂದು ವಿಶೇಷ ಅರ್ಥವನ್ನು ಪಡೆಯುತ್ತವೆ. ಈ ವಿಷಯದಲ್ಲಿ ನಮ್ಮ ಅನುಭವಕ್ಕೆ ಬಂದ ಒಂದು ಸತ್ಯ ಘಟನೆ ಹೀಗಿದೆ.

ಪ್ಯಾರಿಸ್ ಮಹಾನಗರದಲ್ಲಿ ಇಂಡೋ-ಫ್ರೆಂಚ್ ಸಾಂಸ್ಕೃತಿಕ ಸಂಸ್ಥೆಯೊಂದು ಇದೆ. ಅದನ್ನು ಸ್ಥಾಪಿಸಿದವರು ಕರ್ನಾಟಕದವರೇ ಆದ ದಿವಂಗತ ಡಾ. ಮಹೇಶ್ ಘಟ್ರಡ್ಯಾಲ್‌ರವರು. ಫ್ರೆಂಚ್ ಮಹಿಳೆಯನ್ನು ಮದುವೆಯಾಗಿ ಅಲ್ಲಿಯೇ ನೆಲೆಸಿದ್ದ ಅವರು ತಾಯ್ನಾಡನ್ನು ಮರೆಯದೆ ಬಡ ಜನರಿಗೆ ಅನುಕೂಲವಾಗಲೆಂದು ಅವರು ಹುಟ್ಟಿ ಬೆಳೆದ ಗ್ರಾಮವಾದ ಗದಗ ಸಮೀಪದ 'ಹಳಿಗುಡಿ'ಯಲ್ಲಿ ಕೋಟ್ಯಂತರ ರೂ. ಖರ್ಚುಮಾಡಿ ಒಂದು ಸುಸಜ್ಜಿತ ಆಸ್ಪತ್ರೆಯನ್ನು ಕಟ್ಟಿಸಿರುತ್ತಾರೆ. ಆ ಆಸ್ಪತ್ರೆಯ ಕಟ್ಟಡದ ವಿನ್ಯಾಸವನ್ನು ತಯಾರು ಮಾಡಲು ಪ್ಯಾರಿಸ್‌ನಿಂದ ಒಬ್ಬ ನುರಿತ ಆರ್ಕಿಟೆಕ್ಟ್‌ರವರನ್ನು ಕಳುಹಿಸಿಕೊಟ್ಟಿದ್ದರು. ಅವರ ಹೆಸರು ಫಿಲಿಪ್. ಅವರು ಭಾರತಕ್ಕೆ ಬಂದಾಗ ಒಂದೆರಡು ಬಾರಿ ನಮ್ಮೊಡನೆ ಸಮಾಲೋಚನೆ ನಡೆಸಿದ್ದರು. ಒಮ್ಮೆ ಪ್ಯಾರಿಸ್ ನಗರಕ್ಕೆ ಹೋದಾಗ ಅವರು ಸಿದ್ಧಪಡಿಸಿದ ಆಸ್ಪತ್ರೆ ಕಟ್ಟಡದ ನೀಲಿನಕ್ಷೆಯೊಂದಿಗೆ ಮತ್ತೆ ನಮ್ಮನ್ನು ಭೇಟಿಯಾಗಿದ್ದರು. ಮಾತಿನ ಸಂದರ್ಭದಲ್ಲಿ ತಮ್ಮ ಜೇಬಿನಲ್ಲಿದ್ದ ಪರ್ಸನ್ನು ಹೊರತೆಗೆದು ಅದರಲ್ಲಿದ್ದ ತಮ್ಮ ಮಡದಿ ಮಕ್ಕಳ ಭಾವಚಿತ್ರಗಳನ್ನು ತೋರಿಸಿದರು. ಆ ಭಾವಚಿತ್ರಗಳ ಜೊತೆಗೆ ಸ್ಟ್ಯಾಂಪ್ ಗಾತ್ರದ ಒಂದು ಗಣೇಶನ ಚಿತ್ರವೂ ಇದ್ದುದು ನಮಗೆ ಅಚ್ಚರಿ ಮೂಡಿಸಿತು. ಕ್ರೈಸ್ತ ಧರ್ಮೀಯರಾದ ಅವರಿಗೆ ಹೆಂಡತಿ ಮಕ್ಕಳ ಮೇಲಿನ ಪ್ರೀತಿಯ ಜೊತೆಗೆ ಆ ಗಣೇಶನ ಚಿತ್ರದ ಮೇಲೂ ಅವರ ಹೃದಯದಲ್ಲಿ ವಿಶೇಷ ಒಲವು ಇತ್ತು.

ಅದಕ್ಕೆ ಕಾರಣ ಕಟ್ಟಡದ ವಿನ್ಯಾಸಪೂರ್ವದಲ್ಲಿ ಆಸ್ಪತ್ರೆಯ ಆವರಣದಲ್ಲಿ ರೋಗಿಗಳು ಪೂಜೆ ಸಲ್ಲಿಸಲು ಒಂದು ಗಣೇಶನ ಗುಡಿಯೂ ಇರಬೇಕೆಂದು ಅವರಿಗೆ ಡಾ. ಮಹೇಶ್ ಸೂಚಿಸಿದ್ದರಂತೆ. ಸ್ಥಳಪರಿಶೀಲನೆಗೆಂದು 'ಹಳಿಗುಡಿ'ಗೆ ಹೋಗಿ ಆಸ್ಪತ್ರೆಯ ಆವರಣದಲ್ಲಿ ಓಡಾಡುತ್ತಿರುವಾಗ ಇದ್ದಕ್ಕಿದ್ದಂತೆಯೇ ಗಾಳಿಯಲ್ಲಿ ಅನೇಕ ಕಾಗದದ ಚೂರುಗಳು ತೇಲಿಬಂದವು. ಅವುಗಳಲ್ಲಿ ಒಂದು ಕಾಗದದ ಚೂರು ಅವರ ಎದೆಯ ಮೇಲ್ಭಾಗದಲ್ಲಿ ಕೋಟಿನ ಮೇಲೆ ಅಂಟಿಕೊಂಡಿತು. ಅದುವೇ ಸ್ಟ್ಯಾಂಪ್ ಗಾತ್ರದ ಗಣೇಶನ ಚಿತ್ರ! ಅದನ್ನು ಬಿಸಾಡಲು ಅವರಿಗೆ ಮನಸ್ಸು ಬರಲಿಲ್ಲ. ಆಸ್ಪತ್ರೆಯ ಆವರಣದಲ್ಲಿ ಗಣೇಶನ ಗುಡಿಯ ನಿರ್ಮಾಣಕ್ಕೂ ಎದೆಯ ಮೇಲೆ ಅಂಟಿಕೊಂಡ ಆ ಗಣೇಶನ ಚಿತ್ರಕ್ಕೂ ಏನೋ ಸಂಬಂಧವಿದೆಯೆಂದು ಅವರಿಗೆ ಅನ್ನಿಸಿತು. ಅದನ್ನು ಕಣ್ಣಿಗೆ ಒತ್ತಿಕೊಂಡರು. ಗಣೇಶ ಅವರ ಹೃದಯದ ಆಳಕ್ಕೆ ಇಳಿದಿದ್ದ. ಅಂದಿನಿಂದ ಎಲ್ಲಿಯೇ ಹೋಗಲಿ ಆ ಚಿತ್ರವನ್ನು ತಪ್ಪದೆ ತಮ್ಮ ಪರ್ಸ್‌ನಲ್ಲಿ ಇಟ್ಟುಕೊಂಡಿರುವುದಾಗಿ ಫಿಲಿಪ್ ಗದ್ಗದಿತ ಕಂಠದಿಂದ ನುಡಿದರು! ಸಹೃದಯ ಓದುಗರೇ! ಇದನ್ನೇ ಅಲ್ಲವೇ ಮುಪ್ಪಿನ ಷಡಕ್ಷರಿಯವರು ತಮ್ಮ ಈ ಮುಂದಿನ ಕೈವಲ್ಯಪದದಲ್ಲಿ ಹೇಳಬಯಸಿದ್ದು:

**ಅವರವರ ಭಾವಕ್ಕೆ**
**ಅವರವರ ಪೂಜೆಗಂ**
**ಅವರವರಿಗೆಲ್ಲ ಶಿವ ನೀನೊಬ್ಬನೆ!**

**1.9.2011**

**ಶ್ರೀ ತರಳಬಾಳು ಜಗದ್ಗುರು**
**ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**

❑